ಇಂಡಸ್ಟ್ರೀಯಲ್ ಎಸ್ಟೇಟ್‌ಗೆ ವಿದ್ಯುತ್ ಮತ್ತು ನೀರು ಒದಗಿಸುವುದು

೧೬೩ (೬೪೭) ಶ್ರೀ ಕೆ. ವಸಂತ್ ಬಂಗೇರ (ಬೆಳ್ತಂಗಡಿ).—ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ, ಗಣಿ ಮತ್ತು ಭೂವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ;—

(ಅ) ಬೆಳ್ತಂಗಡಿ ತಾಲ್ಲೂಕಿನ ಮೇಲಂತಬೆಟ್ಟು ಗ್ರಾಮದಲ್ಲಿ ಇಂಡಸ್ಟ್ರೀಯಲ್ ಎಸ್ಟೇಟ್‌ಗಾಗಿ ೧೦ ಎಕರೆ ಭೂಮಿ ನಿಗಧಿಪಡಿಸಿರುವುದು ನಿಜವೇ.

(ಆ) ಹಾಗಿದ್ದಲ್ಲಿ, ಸದರಿ ಭೂಮಿಯನ್ನು ಇಂಡಸ್ಟ್ರೀಯಲ್ ಎಸ್ಟೇಟ್‌ಗಾಗಿ ವಿಾಸಲಾಗಿರಿಸಿ ಎಷ್ಟು ವರ್ಷಗಳಾದವು.

(ಇ) ಇಂಡಸ್ಟ್ರೀಯಲ್ ಎಸ್ಟೇಟ್‌ಗೆ ಬೇಕಾದ ವಿದ್ಯುತ್ ಹಾಗೂ ನೀರು ಒದಗಿಸಿ ಮತ್ತು ಶೆಡ್ಡುಗಳನ್ನು ರಚಿಸಲಾಗಿದೆಯೆ. ಹಾಗಿದ್ದಲ್ಲಿ ಇದುವರೆವಿಗೂ ಮೇಲ್ಕಂಡ ಅನುಕೂಲತೆಗಳನ್ನು ಒದಗಿಸದಿರಲು ಕಾರಣವೇನು ?

(ಈ) ಹಾಗಿದ್ದಲ್ಲಿ, ಯಾವಾಗ ಒದಗಿಸಲಾಗುವುದು ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಣ್ಣ ಪ್ರಮಾಣದ ಕೈಗಾರಿಕಾ, ಗಣಿ ಮತ್ತು ಭೂವಿಜ್ಞಾನ ಸಚಿವರು).—

(ಅ) ಹೌದು.

(ಆ) ಐದು ವರ್ಷ.

(ಇ) ಈ ಸ್ಥಳದಲ್ಲಿ ಇದುವರೆಗೆ ಕೈಗಾರಿಕಾ ವಸಾಹತುಗಳನ್ನು ಸ್ಥಾಪಿಸಿಲ್ಲವಾದುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

(ಈ) ಬೇಡಿಕೆಯ ಸಮೀಕ್ಷೆಯನ್ನು ನಡೆಸಿದ ನಂತರ ಮಳಿಗೆಗಳನ್ನು ಕಟ್ಟಲು ಕ್ರಮ ಕೈಗೊಳ್ಳಲಾಗುವುದು. ಕೈಗಾರಿಕಾ ವಸಾಹತುವನ್ನು ಸ್ಥಾಪಿಸಿದ ನಂತರ ಅಗತ್ಯ ಸೌಲಭ್ಯಗಳನ್ನು ಒದಗಿಸಲಾಗುವುದು.

ಶ್ರೀ ಕೆ. ವಸಂತ ಬಂಗೇರ.—ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆಯನ್ನು ನಾನು ಕಳೆದ ೫ ವರ್ಷಗಳಿಂದಲೂ ಸತತವಾಗಿ ಕೇಳುತ್ತಿದ್ದೇನೆ. ೫ ಸಾರಿಯೂ ಕೂಡ ಒಂದೇರೀತಿಯ ಉತ್ತರವನ್ನು ಕೊಡುತ್ತಾ ಬಂದಿದ್ದಾರೆ. ಇದರಲ್ಲಿ ಸ್ವಲ್ಪವೂ ಕೂಡ ಬದಲಾವಣೆ ಮಾಡಿಲ್ಲ. ಇಷ್ಟರವರೆಗೆ ಅಲ್ಲಿ ಏನಾದರೂ ಕೆಲಸವನ್ನು ಮಾಡಿದ್ದಾರೆಯೇ ಎಂದರೆ ಏನೂ ಇಲ್ಲ. ಆದರೆ ಕಳೆದ ೫ ವರ್ಷಗಳಿಂದಲೂ ಕೂಡ ಈ ಬೇಡಿಕೆಯ ಬಗ್ಗೆ ಸಮೀಕ್ಷೆಯನ್ನು ನಡೆಸುತ್ತಿದ್ದೇವೆ ಎಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ೫ ವರ್ಷಗಳಿಂದಲೂ ಇವರು ಸಮೀಕ್ಷೆಯನ್ನು ಏತಕ್ಕೆ ನಡೆಸಲಿಲ್ಲ ? ನಾನಾದರೂ ಕೇಳುತ್ತೇನೆ, ಈ ಸಮೀಕ್ಷೆಯನ್ನು ಸರ್ಕಾರದವರು ಎಷ್ಟು ದಿವಸದೊಳಗೆ ಮುತ್ತು ಷೆಡ್ಡುಗಳ ನಿರ್ಮಾಣ ಕಾರ್ಯವನ್ನು ಯಾವಾಗ ಪ್ರಾರಂಭ ಮಾಡುತ್ತಾರೆಂಬುದನ್ನು ತಿಳಿಸಬೇಕು ?

ಶ್ರೀ ರಮೇಶ್ ಸಿ. ಜಿಗಜಿಣಗಿ.—ಅಲ್ಲಿ ಕೈಗಾರಿಕಾ ವಸಾಹತುಗಳನ್ನು ನಿರ್ಮಾಣ ಮಾಡ ಬೇಕೆಂದು ತೀರ್ಮಾನವಾಗಿತ್ತು. ಆದರೆ ಕಾರಣಾಂತರಗಳಿಂದ ನಿರ್ಮಾಣ ಕಾರ್ಯ ಆಗಲಿಲ್ಲ. ರಾಜ್ಯದಲ್ಲಿ ಎಲ್ಲ ಕಡೆಗಳಲ್ಲೂ ಈ ಷೆಡ್ಡುಗಳ ನಿರ್ಮಾಣವನ್ನು ನಾವು ಮಾಡಿಸುವುದಕ್ಕೆ ಸಾಧ್ಯವಿಲ್ಲ. ನಾವು ಈಗ ಕಟ್ಟಿಸಿರುವ ಕಟ್ಟಡಗಳಲ್ಲಿ ೧೯೧ ಮಳಿಗೆಗಳು ಭರ್ತಿಯಾಗದೆ ಹಾಗೆಯೇ ಖಾಲಿ ಇವೆ. ಇದಕ್ಕಾಗಿ ನಾವು ಹೂಡಿರುವ ಲಕ್ಷಾಂತರ ರೂಪಾಯಿಗಳು ವೇಸ್ಟ್ ಆದಂತಾಗಿದೆ. ಆದ್ದರಿಂದ ಮಾನ್ಯ ಸದಸ್ಯರು ಇದರ ಬಗ್ಗೆ ಒತ್ತಾಯ ಮಾಡುವುದು ಬೇಡ. ಮಾನ್ಯ ಸದಸ್ಯರು ಸೂಚಿಸಿರುವ ಸ್ಥಳದಲ್ಲಿ ಹೊಸ ಷೆಡ್ಡುಗಳ ಅವಶ್ಯಕತೆ ಇದೆಯೇ ಅಥವಾ ಇಲ್ಲವೇ ಎಂಬುದನ್ನು ಸಂಪೂರ್ಣವಾಗಿ ಸಮೀಕ್ಷೆ ಮಾಡಿಸಿ, ನಿಜವಾಗಿಯೂ ಅಲ್ಲಿ ಷೆಡ್ಡುಗಳ ಅವಶ್ಯಕತೆ ಇದೆಯೆಂದು ಕಂಡುಬಂದರೆ ಖಂಡಿತ ವಾಗಿಯೂ ಅಲ್ಲಿ ಷೆಡ್ಡುಗಳನ್ನು ಕಟ್ಟಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ವಸಂತ ಬಂಗೇರ.—ಇನ್ನು ಎಷ್ಟು ದಿವಸದಲ್ಲಿ ಸಮೀಕ್ಷೆಯು ಕೆಲಸವನ್ನು ಪ್ರಾರಂಭಿಸುತ್ತೀರಿ ? ಈಗಾಗಲೇ ಬೇರೆ ಬೇರೆ ಸ್ಥಳಗಳಲ್ಲಿ ಕಟ್ಟಿಸಿರತಕ್ಕ ಷೆಡ್ಡುಗಳು ಖಾಲಿ ಇವೆ. ಯಾರೂ ಕೂಡ ಅವುಗಳಿಗೆ ಬಂದಿಲ್ಲವೆಂದು ಹೇಳುತ್ತಿದ್ದೀರಿ. ಎಲ್ಲಿ ಷೆಡ್ಡುಗಳ ಅವಶ್ಯಕತೆ ಇದೆಯೋ ಅಲ್ಲಿ ಕಟ್ಟಿಸುವುದಿಲ್ಲ, ಎಲ್ಲಿ ಅವಶ್ಯಕತೆ ಇಲ್ಲವೋ ಅಲ್ಲಿ ಕಟ್ಟಿಸುತ್ತೀರಿ, ನಮ್ಮಲ್ಲಿ ಸಾವಿರಾರು ಜನರು ನಿರುದ್ಯೋಗಿಗಳಿದ್ದಾರೆ. ತಾವು ತಕ್ಷಣ ಈ ಷೆಡ್ಡುಗಳನ್ನು ಕಟ್ಟಿಸಿಕೊಟ್ಟರೆ ಆ ಜನರು ಏನಾದರೂ ಕೈಗಾರಿಕೆ ಪ್ರಾರಂಭ ಮಾಡಲು ಅನುಕೂಲವಾಗುತ್ತದೆ. ಆದ್ದರಿಂದ ಇದನ್ನು ಆದಷ್ಟುಬೇಗ ಮಾಡಿಸುತ್ತೀರಾ ?

ಶ್ರೀ ರಮೇಶ್ ಸಿ. ಜಿಗಜಿಣಗಿ.—ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಇಷ್ಟುಮಾತ್ರ ಹೇಳಬಯಸುತ್ತೇನೆ. ಯಾರ್ಯಾರಿಗೆ ಷೆಡ್ಡುಗಳ ಅವಶ್ಯಕತೆ ಇದೆ ಎಂಬುದಕ್ಕೆ ಸಂಬಂಧಪಟ್ಟವರಿಂದ ಅರ್ಜಿ ಮತ್ತು ಬಾಂಡುಗಳನ್ನು ಸಿದ್ಧಪಡಿಸಿಕೊಂಡು ಮಾನ್ಯ ಸದಸ್ಯರು ತೆಗೆದುಕೊಂಡು ಬಂದರೆ ನಾವು ಖಂಡಿತ ಕಟ್ಟಿಸಿಕೊಡುವುದಕ್ಕೆ ಕ್ರಮ ಕೈಗೊಳ್ಳುತ್ತೇವೆ.

ವಿದ್ಯುತ್ ಯೋಜನೆಗಳ ಪ್ರಗತಿ

೧೬೪ (೩೨೮) ಶ್ರೀ ಆರ್. ಎನ್. ನಾಯ್ಕ್ (ಭಟ್ಕಳ್).—ಮಾನ್ಯ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ಕರ್ನಾಟಕ ರಾಜ್ಯದಲ್ಲಿ ಎಷ್ಟು ಕಡೆ ವಿದ್ಯುತ್ ಯೋಜನೆಗಳ ಕೆಲಸ ಇನ್ನೂ ಪ್ರಗತಿಯಲ್ಲಿದೆ, ಹಾಗೂ ಅವು ಯಾವುವು ?

ಆ) ಯಾವ ಯಾವ ಕಡೆ ವಿದ್ಯುತ್ ಯೋಜನೆಗಳ ಕೆಲಸಕ್ಕೆ ತಡೆ ಒಡ್ಡುವ ಪ್ರಯತ್ನ ನಡೆದಿದೆ?

ಇ) ಹಾಗೇ ತಡೆ ಒಡ್ಡಲು ಕಾರಣವೇನು ? ತಡೆ ಒಡ್ಡುವವರು ಯಾರು ಮತ್ತು ಆ ಬಗ್ಗೆ ಸರ್ಕಾರ ಕೈಕೊಂಡ ಕ್ರಮವೇನು ?

ಶ್ರೀ ಲಕ್ಷ್ಮೀನರಸಿಂಹಯ್ಯ (ಮಾನ್ಯ ವಿದ್ಯುತ್ ಮಂತ್ರಿಗಳು).—

ಅ) ಕರ್ನಾಟಕ ರಾಜ್ಯದಲ್ಲಿ ಈ ಕೆಳಕಾಣಿಸಿದ ವಿದ್ಯುತ್ ಯೋಜನೆಗಳು ಪ್ರಗತಿಯಲ್ಲಿವೆ:

೧) ವರಾಹಿ ಜಲ ವಿದ್ಯುತ್ ಯೋಜನೆ ಹಂತ–೧

೨) ಘಟಪ್ರಭಾ ವಿದ್ಯುತ್ ಯೋಜನೆ

೩) ಕಾಳಿನದಿ ಯೋಜನೆ ಎರಡನೇ ಹಂತ

೪) ಶರಾವತಿ ಕೆಳಪ್ರವಾಹ ಯೋಜನೆ

೫) ಸಣ್ಣ ಪ್ರಮಾಣದ ಜಲ ವಿದ್ಯುತ್ ಯೋಜನೆಗಳು

೬) ರಾಯಚೂರು ಶಾಖೋತ್ಪನ್ನ ವಿದ್ಯುದಾಗಾರ ಎರಡನೇ ಹಂತ (ಘಟಕ ೩ ಮತ್ತು ೪)

೭) ಕೈಗಾ ಅಣುವಿದ್ಯುತ್ ಸ್ಥಾವರ (ಅಣು ವಿದ್ಯುತ್ ನಿಗಮದ ಕಾಮಗಾರಿ)

ಆ) ಈ ಕೆಳಕಂಡ ವಿದ್ಯುತ್ ಯೋಜನೆಗಳ ಕೆಲಸಕ್ಕೆ ತಡೆ ಒಡ್ಡುವ ಪ್ರಯತ್ನ ನಡೆದಿದೆ:

೧) ಬೇಡ್ತಿ ಯೋಜನೆ

೨) ಶರಾವತಿ ಕೆಳಪ್ರವಾಹ ಯೋಜನೆ

೩) ಕೈಗಾ ಅಣುವಿದ್ಯುತ್ ಸ್ಥಾವರ